**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ರಾಣೇಬೆನ್ನೂರು.**

**MVC No. 1044/2019 C/w 1045/2019 and 1046/2019**

| | | |
|---|---|---|
| ಸಾಕ್ಷಿದಾರರ ಹೆಸರು | : ರಂಗಪ್ಪ ಯಮುನಪ್ಪ ಅಂಬಿಗೇರ | ***R.W-2*** |
| ತಂದೆಯ ಹೆಸರು | : ಯಮುನಪ್ಪ | |
| ವಯಸ್ಸು | : 62 ವರ್ಷ | |
| ಉದ್ಯೋಗ | : ನಿವೃತ್ತ ಪಿ ಎಸ್ ಐ | |
| ವಾಸ | : ರಾಣೇಬೆನ್ನೂರು. | |

**ದಿನಾಂಕಃ 27-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: 2 ನೆ ಎದುರುದಾರರ ಪರ ವಕೀಲರಿಂದಃ**

1. ನಾನು ಬ್ಯಾಡಗಿ ಪೋಲಿಸ್ ಠಾಣೆಯಲ್ಲಿ 2014 ರಿಂದ 2020 ರವರೆಗೆ ಎ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಬ್ಯಾಡಗಿ ಪೋಲಿಸ್ ಠಾಣಾ ಅಪರಾಧ ಸಂಖ್ಯೆ 31/2018 ನೇದ್ದರಲ್ಲಿ ದೂರುದಾರರಿಂದ ದೂರನ್ನು ಸ್ವೀಕರಿಸಿಕೊಂಡು ಪ್ರಕರಣ ದಾಖಲಿಸಿ ಪ್ರಥಮ ವರ್ತಮಾನ ವರದಿ ತಯಾರಿಸಿ, ತನಿಖೆಯನ್ನು ಮುಂದುವರೆಸಿ ತನಿಖೆ ಪೂರ್ಣಗೊಂಡ ನಂತರ ಆರೋಪಿಯ ವಿರುದ್ದ ದೋಷಾರೋಪಣೆ ಪಟ್ಟಿ ಸಲ್ಲಿಸಿರುತ್ತೇನೆ. ನಾನು ಸದರಿ ದೋಷಾರೋಪಣೆ ಪಟ್ಟಿಯನ್ನು ಆರೋಪಿ ಶಕ್ತಿ ವೇಲಾ ಆನಂದನ್ ಎನ್ನುವವರ ವಿರುದ್ದ ಸಲ್ಲಿಸಿರುತ್ತೇನೆ. ನಾನು ತನಿಖೆಯ ಕಾಲದಲ್ಲಿ ಆರೋಪಿಯ ಕಡೆಯಿಂದ ಅವರ ಚಾಲನಾ ಪರವಾನಿಗೆಯ ಜೆರಾಕ್ಸ ಪ್ರತಿಯನ್ನು ಪಡೆದಿರುತ್ತೇನೆ. ಸಾಕ್ಷಿಗೆ ಈಗ ಸದರಿ ಚಾಲನಾ ಪರವಾನಿಗೆ ಪತ್ರದ ಜೆರಾಕ್ಸ ಪ್ರತಿ ತೋರಿಸಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಚಾಲನಾ ಪರವಾನಿಗೆ ಪ್ರತಿ ಜೆರಾಕ್ಸ ಪ್ರತಿಯಾಗಿದ್ದರಿಂದ ನಿಶಾನೆಯಾಗಿ ಗುರುತಿಸಿರುವುದಿಲ್ಲ. ಸದರಿ ಜೆರಾಕ್ಸ ಪ್ರತಿಯನ್ನು ಆರೋಪಿಯೇ ಕೊಟ್ಟಿರುತ್ತಾನೆ. ನಾನು ಮೂಲ ಚಾಲನಾ ಪರವಾನಿಗೆಯನ್ನು ಪರೀಶಿಲಿಸಿರುವುದಿಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಅರ್ಜಿದಾರರ ಪರ ವಕೀಲರು ಪಾಟಿ ಸವಾಲು ಏನು ಇಲ್ಲ ಎಂದು ಹೇಳಿರುತ್ತಾರೆ.

**R.W**-2

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.